ಭಾನುವಾರ 14–09–2025 ಬೆಂಗಳೂರು ಬೆಲೆ: 5ರೂ, 4ಪಟಗಳು ಸಂಪುಟ 01–ಸಂಚಿಕೆ 46
Digital Varthe Kannada Daily Volume 01 - Issue 46 Sundya 12-09-2025 Price: 5/- Rs 2 Pages Bengalore

DIGITAL VARTHE
www.digitalvarthe.com
digitalvarthe@gmail.com

# ಡಿಜಿಟಲ್ ವಾರ್ತೆ
ಕನ್ನಡಿಗರ ಶಕ್ತಿ

ಅಭಿಷೇಕ್ ಚಿಕ್ಕಮಾರನಹಳ್ಳಿ
ಸಂಪಾದಕರು
ಪುರುಷೋತ್ತಮ್ ಬಿ.ಹೆಚ್
ವ್ಯವಸ್ಥಾಪಕರು
RNI:KNKAN/25/A1348
ಕನ್ನಡ ದಿನಪತ್ರಿಕೆ



ಬೈರೇಗೌಡನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ ವತಿಯಿಂದ ದಿನಾಂಕ 14.09.2025 ನೇ ಭಾನುವಾರ ನಡೆಯುವ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಗೆ ಮುಖ್ಯಅಥಿತಿಗಳಾಗಿ ಬೆಂಗಳೂರು ಸಹಕಾರ ಹಾಲು ಒಕ್ಕೂಟದ ನಿರ್ದೇಶಕರಾದಂತ ಸನ್ಮಾನ್ಯ ಶ್ರೀ ಸತೀಶ್ ಕಡತನಮಲೆ ರವರನ್ನು ಸಭೆಗೆ ಆಹ್ವಾನಿಸಲಾಯಿತು

## ರೋಹಿಣಿ ವಿವಿದ್ದೋದ್ದೇಶ ಸಹಕಾರ ಸಂಘದಿಂದ 19ನೇ ವಾರ್ಷಿಕ ಮಹಾಸಭೆ

ಮುದಗಲ್: ಶ್ರೀ ರೋಹಣಿ ವಿವಿಧೋದ್ದೇಶ ಸಹಕಾರ ಸಂಘದ 19ನೇ ವಾರ್ಷಿಕ ಮಹಾಸಭೆ ಪಟ್ಟಣದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಶನಿವಾರ ಜರುಗಿತು ಸಂಘದ ಅಧ್ಯಕ್ಷ ಉದಯಕುಮಾರ ಕಂಬಾರ ಜ್ಯೋತಿ ಬೆಳಗುವ ಮೂಲಕ ಸಭೆಯ ಉದ್ಘಾಟನೆ ಮಾಡಿದರು ಸಭೆಯಲ್ಲಿ ಜಮಾ –ಖರ್ಚು ಮತ್ತು ಲಾಭ – ಹಾನಿ ಕುರಿತು ಮಾಹಿತಿ ನೀಡಲಾಗಿತ್ತು.

**ಈ ಸಂದರ್ಭದಲ್ಲಿ ಉಪಾಧ್ಯಕ್ಷ ಮಂಜುನಾಥ ಎಂ ಬನ್ನಿಗೋಳಕರ, ಮುಖ್ಯಕಾರ್ಯನಿರ್ವಾಹಕ ಅಜೀತ್ ರಾಜ ಗಂಟ್ಯಾಳ , ನಾಗರಾಜ ದಫೆದಾರ, ತುಂಗಭದ್ರ ಬ್ಯಾಂಕ ಸಿಂದನೂರ ಅಇಔ ಹನುಮಂತ, ಸಂಗಪ್ಪ ಎಂ ಓಲೆಕಾರ,ಸೇರಿದಂತೆ ರೋಹಣಿ ವಿವಿಧೋದ್ದೇಶ ಸಹಕಾರ ಸಂಘದ ಪದಾಧಿಕಾರಿಗಳು ಇದ್ದರು.**




# ಪ್ರಚೋದನಾಕಾರಿ ಭಾಷಣ ಮಾಡುವವರ ವಿರುದ್ಧ ಎಫ್ಐಆರ್ ಅನಿವಾರ್ಯ :ಸಿಎಂ



ಮೈಸೂರು: ಶಾಂತಿ ಭಂಗಕ್ಕೆ ಪ್ರಯತ್ನಿಸಿ, ಪ್ರಚೋದನಕಾರಿ ಭಾಷಣ ಮಾಡುವವರ ವಿರುದ್ಧ ಎಫ್ಐಆರ್ ದಾಖಲಿಸುವುದು ಅನಿವಾರ್ಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ ಸರ್ಕಾರ ರಾಜಕೀಯ ದ್ವೇಷಕ್ಕಾಗಿ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ, ಬಿಜೆಪಿ ನಾಯಕರು ದಿನಕ್ಕೊಂದು ಹೇಳಿಕೆಗಳನ್ನು ನೀಡಿ, ಪ್ರಚೋದನೆ ಮಾಡತ್ತಿದ್ದಾರೆ. ಶಾಂತಿ, ನೆಮದಿ, ಸೌಹಾರ್ದತೆ ಪಾಲನೆ ಸರ್ಕಾರದ ಕರ್ತವ್ಯ. ಈ ನಿಟ್ಟಿನಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತದೆ ಎಂದರು.

ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವ ಮೂಲಕ ಹಿಂದೂ ನಾಯಕರನ್ನು ಗು–ರಿಯಾಗಿಸಿಕೊಳ್ಳಲಾಗಿದೆ ಎಂಬ ಆರೋಪದಲ್ಲಿ ಹುರುಳಿಲ್ಲ. ನಾನು ಹಿಂದೂ ಅಲ್ಲವೇ? ನನ್ನ ಹೆಸ–ರಿನಲ್ಲಿ ಇಬ್ಬರು ದೇವರ ಹೆಸರುಗಳಿವೆ. ಸಿದ್ದ ಎಂದರೆ ಈಶ್ವರನ ಹೆಸರು, ರಾಮ ವಿಷ್ಣುವಿನ ಹೆಸರು ಎಂದು ತಿರುಗೇಟು ನೀಡಿದರು. ದಸರಾ ಮುಗಿಯುವವರೆಗೂ ಮಾಜಿ ಸಂಸದ ಪ್ರತಾಪ್ ಸಿಂಹನನ್ನು ಜಿಲ್ಲೆಯಿಂದ ಗಡಿಪಾರು ಮಾಡಬೇಕು ಎಂಬ ವಿವಿಧ ಸಂಘಟನೆಗಳ ಬೇಡಿಕೆಯನ್ನು ಪೊಲೀಸರು ಪರಿಶೀಲಿಸುತ್ತಾರೆ ಎಂದು ಹೇಳಿದರು. ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮಷ್ತಾಕ್‌ರನ್ನು ಆಯ್ಕೆ ಮಾಡಿರುವುದರ ವಿರುದ್ಧ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದವರು, ಯಾವ ಕಾರಣಕ್ಕೆ ನ್ಯಾಯಾಲಯದ ಮೊರೆ ಹೋಗಿದ್ದೇವೆ ಎಂಬುದನ್ನು ವಿವರಣೆ ನೀಡಬೇಕು.

ನ್ಯಾಯಾಲಯ ನೀಡುವ ತೀರ್ಮಾನವನ್ನು ಸರ್ಕಾರ ನಿರೀಕ್ಷಿಸುತ್ತಿದೆ. ದಸರಾ ಸಾಂಸ್ಕೃತಿ–ಕ ಆಚರಣೆಯಾಗಿದ್ದು, ಇಂತಹದ್ದೇ ಧರ್ಮದವರು ಭಾಗವಹಿಸಬೇಕೆಂಬ ನಿಯಮಗಳಿಲ್ಲ ಎಂದರು. ತನಿಖೆ ವಿಳಂಬವಿಲ್ಲ: ಧರ್ಮಸ್ಥಳದ ಪ್ರಕರಣದಲ್ಲಿ ಎಸ್ಐಟಿ ತನಿಖೆ ನಡೆಯುತ್ತಿದೆ. ಸರ್ಕಾರ ಯಾವುದೇ ಹಸ್ತಕ್ಷೇಪ ಮಾಡುತ್ತಿಲ್ಲ. ತನಿಖೆಯಲ್ಲಿ ವಿಳಂಬವಾಗುತ್ತಿಲ್ಲ, ಅನಗತ್ಯವಾಗಿ ವಿಳಂಬ ಮಾಡುವಂತೆಯೂ ಇಲ್ಲ ಎಂದು ಹೇಳಿದರು. ಮತಾಂತರ ಶೋಷಿತರ ಹಕ್ಕು: ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಹೊಸ ಜಾತಿಗಳನ್ನು ಹುಟ್ಟುಹಾಕಲಾಗುತ್ತಿದೆ ಎಂದು ಬಿಜೆಪಿಯವರು ಮಾಡುತ್ತಿರುವ ಆರೋಪ ಅರ್ಥಹಿನ. ಮುಂದೆ ಕೇಂದ್ರ ಸರ್ಕಾರ ಕೂಡ ಜಾತಿಗಣತಿ ಮಾಡುತ್ತದೆ. ಆಗ ಬಿಜೆಪಿಯವರು ಇದೇ ರೀತಿ ಮಾತನಾಡುತ್ತಾರೆಯೇ ಎಂದು ಪ್ರಶ್ನಿಸಿದರು.

ಮತಾಂತರ ಬೇಡವೆಂದು ನಾವು ಹೇಳಿದರೂ ವ್ಯವಸ್ಥೆಯ ಪರಿಣಾಮದಿಂದಾಗಿ ಮತಾಂತರವಾಗುತ್ತಾರೆ. ನಮ ಹಿಂದೂ ಸಮಾಜದಲ್ಲಿ ಎಲ್ಲರಿಗೂ ಸಮಾನತೆ ಹಾಗೂ ಸಮಾನ ಅವಕಾಶಗಳಿಲ್ಲ ಅದಕ್ಕಾಗಿ ಮತಾಂತರವಾಗುತ್ತಿವೆ. ಅಸ್ಪೃಶ್ಯತೆ ಏಕೆ ಬಂತು. ಯಾವುದೇ ಧರ್ಮದಲ್ಲಿ ಅಸಮಾನತೆ ಇದ್ದರೂ ಶೋಷಣೆಗೆ ಒಳಗಾದವರಿಗೆ ಮತಾಂತರವಾಗುವ ಹಕ್ಕುಗಳಿರುತ್ತವೆ ಎಂದರು. ಮತಾಂತರಗೊಂಡಿರುವವರು ಅದೇ ಧರ್ಮ ಅಥವಾ ಜಾತಿಯನ್ನು ಸಮೀಕ್ಷೆಯಲ್ಲಿ ಬರೆಸುತ್ತಾರೆ. ಒಂದು ವೇಳೆ ನಾನು ಹಿಂದೂ ಧರ್ಮದಿಂದ ಮುಸ್ಲಿಂ ಧರ್ಮಕ್ಕೆ ಮತಾಂತರವಾಗಿದ್ದೇನೆ ಎಂದು ಭಾವಿಸುವುದಾರೆ? ಮತಾಂತರವಾಗುವುದಿಲ್ಲ ಹಾಗೆ ಭಾವಿಸುವುದಾದರೆ ಸಮೀಕ್ಷೆಯಲ್ಲಿ ಮತಾಂತರವಾಗಿರುವ ಧರ್ಮವನ್ನೇ ಬರೆಸಬೇಕಾಗುತ್ತದೆ ಎಂದರು.

ವಿಪಕ್ಷಗಳ ಒತ್ತಡಕ್ಕೆ ಮಣಿದ ಪ್ರಧಾನಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರೊಧ ಪಕ್ಷಗಳ ಒತ್ತಡಕ್ಕೆ ಮಣಿದು ಮಣಿಪುರಕ್ಕೆ ಭೇಟಿ ನೀಡಿದ್ದಾರೆ. ಈ ಹಿಂದೆ ಗಲಾಟೆ ನಡೆಯುತ್ತಿದ್ದಾಗ ಅಲ್ಲಿಗೆ ಹೋಗಲಿಲ್ಲ. ಈಗ ಪರಿಸ್ಥಿತಿ ತಿಳಿಗೊಳ್ಳುತ್ತಿರುವಾಗ ಭೇಟಿ ನೀಡಿದ್ದಾರೆ. ಎರಡು ವರ್ಷಗಳಿಂದ ಏಕೆ ಸುಮನಿದ್ದರು ಎಂದು ಪ್ರಶ್ನಿಸಿದರು. ಬಿಜೆಪಿ ಮುಖ್ಯಮಂತ್ರಿಗಳಿಗೆ ತಿಳಿ ಹೇಳಲಿ: ಮಹದಾಯಿ ನದಿಗೆ ಅಡ್ಡಲಾಗಿ ಕಳಸಾ ಬಂಡೂರಿ ಅಣೆಕಟ್ಟೆ ನಿರ್ಮಿಸಲು ಗೋವಾ ಸರ್ಕಾರ ಅಡ್ಡಿ ಪಡಿಸುತ್ತಿದೆ. ಆಲಮಟ್ಟಿ ಆಣೆಕಟ್ಟೆಯ ಎತ್ತರವನ್ನು 519 ಮೀಟರ್‌ನಿಂದ 524 ಮೀಟರ್‌ಗೆ ಹೆಚ್ಚಿಸಲು 2010ರಲ್ಲಿ 15 ವರ್ಷಗಳ ಹಿಂದೆಯೇ ನ್ಯಾಯಾಧೀಕರಣ ಆದ–ೇಶ ನೀಡಿದೆ. ಆದರೆ, ಮಹಾರಾಷ್ಟ್ರ ಸರ್ಕಾರ ವಿರೋಧ ವ್ಯಕ್ತಪಡಿಸುತ್ತದೆ.

ಕಾವೇರಿ ನದಿ ಅಡ್ಡಲಾಗಿ ಮೇಕೆದಾಟು ಬಳಿ ಸಮತೋಲಿತ ಆಣೆಕಟ್ಟು ನಿರ್ಮಿಸಲು ತಮಿಳುನಾಡು ವಿರೋಧ ವ್ಯಕ್ತಪಡಿಸುತ್ತಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಜ್ಯಗಳ ಮುಖ್ಯಮಂತ್ರಿಯವರಿಗೆ ತಿಳಿ ಹೇಳಿ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಮಹಾರಾಷ್ಟ್ರ ಮತ್ತು ಗೋವಾದಲ್ಲಿ ಬಿಜೆಪಿಯ ಮುಖ್ಯಮಂತ್ರಿಗಳಿದ್ದಾರೆ ಅವ–ರಿಗೆ ಬುದ್ಧಿ ಹೇಳಲಿ ಎಂದರು. ಅಪಘಾತಕ್ಕೆ ಸರ್ಕಾರ ಹೊಣೆಯಲ್ಲ: ಹಾಸನ ಗಣೇಶೋತ್ಸವದ ವೇಳೆ ಲಾರಿ ಹರಿದಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಮೃತಪಟ್ಟವರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗಿದೆ. ಈಗ ಪ್ರತಿ ಕುಟುಂಬಕ್ಕೆ 10 ಲಕ್ಷ ರೂ. ನೀಡಬೇಕೆಂದು ಒತ್ತಾಯಿಸುತ್ತಿರುವ ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಎಷ್ಟು ಪರಿಹಹಾರ ಕೊಟ್ಟಿದ್ದರು ಎಂದು ಪ್ರಶ್ನಿಸಿದರು. ಹಾಸನದ ದುರಂತವನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿದರೆ, ಇದೇ ರೀತಿಯ ಇತರ ಪ್ರಕರಣಗಳನ್ನು ಪರಿಗಣಿಸಬೇಕಾಗುತ್ತದೆ.



# ನಂದಿಯಿಂದ ನಾವೆಲ್ಲರೂ ಒಂದಾದರೆ ಮಾತ್ರ ಭಾರತೀಯ ಸಂಸ್ಕೃತಿ ಉಳಿಸಿಕೊಳ್ಳಲು ಸಾಧ್ಯ

"ನಂದಿಯಿಂದ ನಾವೆಲ್ಲರೂ ಒಂದಾದರೆ ಮಾತ್ರ ಭಾರತೀಯ ಸಂಸ್ಕೃತಿ ಉಳಿಸಿಕೊಳ್ಳಲು ಸಾಧ್ಯ" ಎಂಬ ವೈಜ್ಞಾನಿಕ ವಿಚಾರದ ಕುರಿತು ಜನಜಾಗೃತಿ ಮೂಡಿಸಲು ವಿಜಯಪುರದಿಂದ ಬೆಂಗಳೂರಿನ ವರೆಗೆ ನಂದಿ ಕೂಗು ಅಭಿಯಾನದ ವತಿಯಿಂದ ಆಯೋಜಿಸಿದ ಪಾದಯಾತ್ರೆಯು ಸೋಂಪುರ ನಗರಕ್ಕೆ ದಿನಾಂಕ: 11–09–25 ರಂದು ಅಗಮಿಸಿತು. ಪಾದಯತ್ರೆ ನೇತೃತ್ವ ವಹಿಸಿದ ಶ್ರೀ ಬಸವರಾಜ ಬಿರಾದಾರ ಅವರು ಮಾತನಾಡಿ, ನಂದಿ ಶಕ್ತಿಯ ಅಂಶ ಮಾನವನ ರಕ್ತದಲ್ಲಿ ಹರಿಯುತ್ತಿರುವುದು ಕಡಿಮೆಯಾದಂತೆ ಮಾನವ ಕುಲಕ್ಕೆ ಉಳಿಗಾಲವಿಲ್ಲ ಹಾಗೂ ಮಾನವ ಕುಲ ಎಷ್ಟೇ ಅಭಿವೃದ್ದಿ ಹೊಂದಿದರೂ ಸಹ ನಂದಿ ಸಂತತಿ ಇಲ್ಲದಿದ್ದರೆ ನಾಗರೀಕತೆ ಮುಂದಿನ ಹಂತದ ಅಭಿವೃದ್ಧಿ ಕಾಣಲು ಸಾಧ್ಯವಿಲ್ಲ" ಎಂಬುದರ ಸಂಕೇತವಾಗಿ ಜಗತ್ತಿನ ಎಲ್ಲ ಶಿವಾಲಯಗಳ ಶಿವಲಿಂಗದ ಮುಂದೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ.

ನಂದಿ ಕೃಷಿ ಉಳಿದರೆ ಮಾತ್ರ ನಿರಂತರವಾದ ಬಾಹ್ಯ ಹಾಗೂ ಆಂತ–ರಿಕ ಬೆಳವಣಿಗೆಯಾಗಲು ಸಾಧ್ಯ ಎಂಬುದರ ಸೂಚಕವೇ ಶಿವಾಲಯದ ಶಿವಲಿಂಗದ ಮುಂದೆ ಇರುವ ನಂದಿಯಾಗಿದೆ. ಅನಾದಿ ಕಾಲದಿಂದ ಭಾರತ ದೇಶದಲ್ಲಿ ಅತೀ ಹೆಚ್ಚು ನಂದಿ ಕೃಷಿಕರು ಅಥವಾ ಜೋಡೆತ್ತಿನ ಕೃಷಿಕರು ಇರುವ ಕಾರಣ ಜಗತ್ತಿನಲ್ಲಿ ಅತೀ ಹೆಚ್ಚು ಸನ್ಯಾಸಿಗಳನ್ನು ಹೊಂದಿದ ದೇಶ ನಮ್ಮದಾಗಲು ಸಾಧ್ಯವಾಗಿದೆ. ಗುರು–ಶಿಷ್ಯ ಪರಂಪರೆಯ ಮೂಲ ಕೊಂಡಿಯಾಗಿ ಜೀವಂತ ನಂದಿಗಳು ಹಿಂದಿನಿಂದ ಕೆಲಸ ಮಾಡುತ್ತಾ ಬಂದ ಕಾರಣ ಜಗತ್ತಿನಲ್ಲಿ ಅತೀ ಶ್ರೇಷ್ಠ ಸಂಸ್ಕೃತಿ ಹೊಂದಿದ ದೇಶ ಭಾರತವಾಗಲು ಸಾಧ್ಯವಾಗಿದೆ. ಇದೇ ಕಾರಣ–




ಕ್ಕೆ, ನಂದಿ ತತ್ವ ಅಥವಾ ಬಸವ ತತ್ವದ ಮಹತ್ವ ಅರಿತು ಸಮಾಜಕ್ಕೆ ಸರಿಯಾದ ದಾರಿ ತೋರುವ ಗುರುಗಳ ಸಮಾಧಿಯ ಮೇಲೆ ಅಥವಾ ಗುರುವೆಂಬ ಲಿಂಗದ ಮುಂದೆ ನಂದಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸುವ ಪದ್ಧತಿ ಜಾರಿಯಲ್ಲಿರುವುದು.

ನಂದಿ ತತ್ವ ಅಥವಾ ಬಸವ ತತ್ವದ ಮೂಲ ಬೇರುಗಳಾದ ನಂದಿ ಕೃಷಿಕರ ಪೋಷಣೆಯ ಮೂಲಕ ಪಂಚ ಮಹಾಭೂತಗಳನ್ನು ಶುದ್ಧವಾಗಿ ಇಟ್ಟುಕೊಂಡು ಮುಂದೆ ಸಾಗಿದರೆ ಮಾತ್ರ ನಾಗರೀಕತೆಗೆ ಒಳ್ಳೆಯ ಭವಿಷ್ಯವಿರುವುದು ಎಂಬುದು ಇತಿಹಾಸದಿಂದ ತಿಳಿಯುತ್ತದೆ. ಭಾರತ ದೇಶದ ಸಂವಿಧಾನದ ಮೊದಲ ಭಾಗದ ಮೊದಲ ಪುಟವನ್ನು ಸಿಂಧೂ ನದಿ ನಾಗ–ರೀಕತೆಯ ನಂದಿ ಮುದ್ರೆಯಿಂದ ಅಲಂಕರಿಸಿರುವುದು ನಂದಿ ತತ್ವ ಅಥವಾ ಬಸವ ತತ್ವವು ಸಂವಿಧಾನದ ಬುನಾದಿ ಎಂಬುದನ್ನು ಸೂಚಿಸುತ್ತದೆ. ಸಂಸತ್ ಭವನದಲ್ಲಿ ಸ್ಥಾಪಿಸಲಾದ ಸೆಂಗೋಲ್ ಅಥವಾ ಧರ್ಮ ದಂಡದ ಮೇಲಿರುವ ನಂದಿ ಮೂರ್ತಿಯು ನಂದಿ ತತ್ವ ಅಥವಾ ಬಸವ ತತ್ವದ ಮೇಲೆ ಎಲ್ಲ ಧರ್ಮಗಳ ಭವಿಷ್ಯ ನಿಂತಿದೆ ಎಂಬುದರ ಸೂಚಕವಾಗಿದೆ.

ನಂದಿ ತತ್ವ ಅಥವಾ ಬಸವ ತತ್ವದ ವಿರುದ್ಧವಾಗಿ ಅನುಷ್ಠಾನವಾದ ತೈಲ ತತ್ವವನ್ನು ಕೇವಲ ಸಾರಿಗೆಗೆ ಸೀಮಿತಗೊಳಿಸದೆ ರೈತರ ಜಮೀನುಗಳಲ್ಲಿ ಹಲವು ಯಂತ್ರಗಳ ಮೂಲಕ ಅನುಷ್ಠಾನ ಗೊಳಿಸಿದಂತೆ ನಂದಿ ಕೃಷಿ ನಾಶವಾಗಿ ನಂದಿ ತತ್ವ ಅಥವಾ ಬಸವ ತತ್ವಕ್ಕೆ ಕೊಡಲೆ ಪೆಟ್ಟು ಬೀಳಲು ಪ್ರಾರಂಭಿಸಿದೆ. ಇತಿಹಾಸದಲ್ಲಿ ಬಸವ ತತ್ವಕ್ಕೆ ಏರಿಳಿತವಾದಂತೆ, ಇಂದು ತೈಲ ತತ್ವ ಆಧಾರಿತ ಯೋಜನೆಗಳ ಅನುಷ್ಠಾನದ ಭರದಲ್ಲಿ ಪ್ರಕೃತಿಯನ್ನು ಜೀವಂತವಾಗಿ ಇಡುತ್ತಾ ಬಂದ ನಂದಿ ತತ್ವ ಅಥವಾ ಬಸವ ತತ್ವದ ಶಕ್ತಿಯನ್ನು ನಿರ್ಲಕ್ಷಿಸುತ್ತಿದ್ದೇವೆ. ಇದರಿಂದ, ಕರ್ನಾಟಕದ 60 ಪ್ರತಿಶತ ಮಣ್ಣು ಅಸಹಜ ಸ್ಥಿತಿಗೆ ಬಂದು ತಲುಪಿದೆ. ಸತ್ವ ರಹಿತ ಆಹಾರ ಸೇವನೆಯಿಂದ ಸಮಾಜದಲ್ಲಿ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳು ಹೆಚ್ಚಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಇದು ಹೀಗೆಯೇ ಮುಂದುವರೆದರೆ, ರೈತರು, ದೇಸಿ ಉದ್ದಿಮೆದಾರರು, ರಾಜಕೀಯ ನಾಯಕರು ಹಾಗೂ ಆಧ್ಯಾತ್ಮಿಕ ನಾಯಕರು ತೀವ್ರತರವಾದ ಸಮಸ್ಯೆ ಎದುರಿಸಬೇಕಾದ ದಿನಗಳು ಹತ್ತಿರವಾಗುವವು.




ನಂದಿ ಕೃಷಿಕರ ಶ್ರಮ ಹಾಗೂ ಜವಾಬ್ದಾ–ರಿಯನ್ನು ಪರಿಗಣಿಸದೆ, ಕೃಷಿ ಯಂತ್ರಗಳಿಗೆ ಪ್ರೋತ್ಸಾಹ ನೀಡುವುದು ಹಾಗೂ ಜನಪ್ರಿಯ ಯೋಜನೆಗಳ ಜಾರಿ ಹೆಚ್ಚಾದಂತೆ ನಂದಿ ಸಂಪತ್ತು ಕಾಸಾಯಿಖಾನೆಯ ಪಾಲಾಗಿ ಬಸವ ತತ್ವ ನಾಶವಾಗುವುದು ತೀವ್ರವಾಗುತ್ತಿದೆ. ವಿಜಯಪುರದ ಶ್ರೀ ಸಿದ್ಧೇಶ್ವರ ಜಾತ್ರೆಗೆ ಕಳೆದ ವರ್ಷ 75 ಸಾವಿರ ದನಕರುಗಳು ಆಗಮಿಸಿದ್ದವು, ಈ ವರ್ಷ ಕೇವಲ 4 ಸಾವಿರ ದನಕರುಗಳು ಆಗಮಿಸಿವೆ. ಬೇರುಗಳಿಲ್ಲದೆ ಮರ ಜೀವಂತವಾಗಿ ಇರಲು ಹೇಗೆ ಸಾಧ್ಯವಿಲ್ಲವೋ, ಅದೇ ರೀತಿ ಬಸವ ತತ್ವದ ಮೂಲ ಬೇರುಗಳಾದ ಜೋಡೆತ್ತಿನ ಕೃಷಿಕರನ್ನು ಪ್ರೋತ್ಸಾಹಿಸಿ ಬೆಳೆಸದೆ ಭಾರತೀಯ ಸಂಸ್ಕೃತಿ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಭಾರತೀಯ ಸಂಸ್ಕೃತಿಯ ಆಶಯಗಳು ಜೋಡೆತ್ತಿನ ಕೃಷಿಕರ ಮನೆಯಲ್ಲಿ ಇಡೇರುತ್ತಿರುವುದನ್ನು ವೈಜ್ಞಾನಿಕವಾಗಿ ತಿಳಿಸಬಹುದು.

ಇಂದಿನ ಆಧುನಿಕ ಸಮಸ್ಯೆಗಳಿಗೆ ಪರಿಹಾರ ನೀಡುವ ಸಾಮರ್ಥ್ಯವಿರುವ ನಂದಿ ಆಧಾರಿತ ಬಸವ ತತ್ವವನ್ನು ವೈಜ್ಞಾನಿಕ ನೆಲೆಗಟ್ಟಿನ ಮೇಲೆ ಅನುಷ್ಠಾನ ಗೊಳಿಸಲು ಭಾರತೀಯರೆಲ್ಲರೂ ಒಗ್ಗೂಡಬೇಕಾಗಿದೆ. ನಂದಿ ಕೃಷಿ ಹಾಗೂ ಗವ್ಯ ಉತ್ಪನ್ನಗಳ ತಯಾರಿಕೆಗೆ, ಬಳಕೆಗೆ ಹಾಗೂ ಮಾರಾಟಕ್ಕೆ ಆಧುನಿಕ ತಂತ್ರಜ್ಞಾನವನ್ನು ವಿಸ್ತರಿಸಬೇಕಾಗಿದೆ. ಆದ–ುನಿಕ ತಂತ್ರಜ್ಞಾನದ ಮೂಲಕ ದೊಡ್ಡ ಪ್ರಮಾಣದಲ್ಲಿ ಗೋಬರ್ ಗ್ಯಾಸ್ ಹಾಗೂ ವಿದ್ಯುತ್ ಉತ್ಪಾದಿಸಿ ಸ್ವಾವಲಂಬಿ ಗ್ರಾಮಗಳನ್ನು ಕಟ್ಟಬೇಕಾಗಿದೆ. ಸ್ವಾವಲಂಬಿ ಗ್ರಾಮಗಳಿಂದ ಭಾರತೀಯ ಸಂಸ್ಕೃತಿ ಉಳಿದು ಬೆಳೆಯಲು ಸಾಧ್ಯ. ನಂದಿ ಶಕ್ತಿ ಬಳಕೆ ಹೆಚ್ಚಾದಂತೆ ಭಾರತ ದೇಶ ವಿಶ್ವ ಗುರುವಿನ ಸ್ಥಾನ ಅಲಂಕರಿಸುವುದರಲ್ಲಿ ಯಾವುದೇ ಸಂಶಯವಿಲ್ಲ. ಪಾದಯಾತ್ರೆ ಸಂದರ್ಭದಲ್ಲಿ ನಂದಿ ಕೃಷಿಕರಿಗೆ ಪೂರಕ ಕಾನೂನು ಯೋಜನೆ ಜಾರಿಗೆ ತರಲು ಪ್ರಯತ್ನಿಸುವ ರಾಜಕೀಯ ನಾಯಕರಿಗೆ ಮತ ನೀಡಲು ಜನರು ಸಂಕಲ್ಪ ಮಾಡಲು ಕೋರಲಾಗುತ್ತಿದೆ ಹಾಗೂ ನಂದಿ ಅಥವಾ ಗವ್ಯ ಉತ್ಪನ್ನಗಳನ್ನು ದಿನನಿತ್ಯ ಜೀವನದಲ್ಲಿ ಬಳಕೆ ಮಾಡಿ ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ತಿಳಿಸಲಾಗುತ್ತಿದೆ.

ಏಕೆಂದರೆ, ನಂದಿ ತತ್ವ ಅಥವಾ ಬಸವ ತತ್ವವು ವಿಶ್ವದ ಎಲ್ಲ ಜನರಿಗೆ ಒಳಿತನ್ನು ಮಾಡುವ ಅತ್ಯಂತ ವೈಜ್ಞಾನಿಕ ವಿಶ್ವ ತತ್ವವಾಗಿದೆ. ಕುಟುಂಬ, ಗ್ರಾಮ, ರಾಜ್ಯ ಹಾಗೂ ದೇಶವೆಂಬ ವಿವಿಧ ಸ್ತರಗಳಲ್ಲಿ ನಾವೆಲ್ಲರೂ ನಂದಿ ಆಧಾರಿತವಾಗಿ ಒಂದಾಗಿ ಪ್ರಕೃತಿಯ ನಾಶವನ್ನು ತಡೆಯಲು ಪ್ರಯತ್ನಿಸಿದರೆ ಮಾತ್ರ ಪ್ರಕೃತಿ ಮಾತೆ ನಮ್ಮ ನಾಶವನ್ನು ತಡೆಯಲು ಸಾಧ್ಯವಿದೆ ಎಂಬ ವಿಚಾರಗಳನ್ನು ತಿಳಿಸಿದರು. ಅಗಳಕುಪ್ಪೆ ಕೆಂಪರಾಮಯ್ಯ ಎಸ್, ಪೇಮ್ಮನಹಳ್ಳಿ ಸಿದ್ದರಾಜು, ಚಂದನಹೊಸಹಳ್ಳಿ ದೇವರಾಜು ಡಿ.ಕೆ, ಹೊನ್ನೇನಹಳ್ಳಿ ರವೀಶ್. ಎಚ್.ಕೆ,ಹುಲಿಕುಂಟೆ ವಿವೇಕ್ ಕುಮಾರ್, ಸೋಂಪುರದ ಮಧು, ರಾಮು, ನಾಗೇಶ್ ಇತರರು ಭಾಗವಹಿಸಿದ್ದರು.




# ಯುವ ಪೀಳಿಗೆಯ ಭಾಗವಹಿಸುವಿಕೆಯಿಂದ ರಂಗಭೂಮಿಗೆ ಹೊಸ ಉಸಿರು: ಕೆ.ವಿ. ನಾಗರಾಜ್ ಮೂರ್ತಿ

ಹೊಸಪೇಟೆ: ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರು, ಹಿರಿಯ ರಂಗಭೂಮಿ ಕಲಾವಿದರು ಹಾಗೂ ಕನ್ನಡ ಚಿತ್ರ–ಧಾರಾವಾಹಿ ನಟರಾದ ಶ್ರೀ ಕೆ.ವಿ. ನಾಗರಾಜ್ ಮೂರ್ತಿ ಅವರು ಇಂದು ಹೊಸಪೇಟೆಗೆ ಆಗಮಿಸಿ, ನಡೆಯುತ್ತಿರುವ ಉಚಿತ ನಾಟಕ ತರಬೇತಿ ಶಿಬಿರದಲ್ಲಿ ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು, ಬಹುತ್ವ ಪ್ರತಿಷ್ಠಾನ ಹೊಸಪೇಟೆ, ಸಂವಾದ ಬೆಂಗಳೂರು ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ಶಿಬಿರ ಆಯೋಜನೆಗೊಂಡಿತ್ತು. ನಾಗರಾಜ್ ಮೂರ್ತಿ ಅವರು ತಮ್ಮ ಮಾತಿನಲ್ಲಿ ರಂಗಭೂಮಿಯ ಹಿನ್ನಲೆ, ಅದರ ಸಾಂಸ್ಕೃತಿಕ ಮಹತ್ವ ಹಾಗೂ ಯುವಪೀಳಿಗೆಗೆ ರಂಗಭೂಮಿಯ ಪರಿಚಯ ಅಗತ್ಯವಿರುವುದರ ಕುರಿತು ಆಳವಾದ ಅಭಿಪ್ರಾಯ ಹಂಚಿಕೊಂಡರು. “ರಂಗಭೂಮಿ ಬದುಕು ಮತ್ತು ಹೆಸರನ್ನೆರಡನ್ನೂ ನೀಡುತ್ತದೆ. ಅದನ್ನು ಶ್ರದ್ಧೆಯಿಂದ ಮತ್ತು



ಭಕ್ತಿಯಿಂದ ನಿರಂತರವಾಗಿ ಕಲಿಯಬೇಕು” ಎಂದು ಅವರು ಸಲಹೆ ನೀಡಿದರು. ಹಂಪಿ ಉತ್ಸವದ ಹಳೆಯ ನೆನಪುಗಳನ್ನು ಅವರು ಶಿಬಿರಾರ್ಥಿಗಳೊಂದಿಗೆ ಹಂಚಿಕೊಂಡು, “ಈ ಭಾಗದಲ್ಲಿ ರಂಗಭೂಮಿ ಮತ್ತೆ ತಲೆಯೆತ್ತುತ್ತಿರುವುದು ಹರ್ಷದ ಸಂಗತಿ.

ಇಂದಿನ ಯುವ ಪೀಳಿಗೆಯ ಸಕ್ರಿಯ ಭಾಗವಹಿಸುವಿಕೆಯು ರಂಗಭೂಮಿಗೆ ಹೊಸ ಜೀವ ತುಂಬುತ್ತಿದೆ” ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾದ ಶ್ರೀ ಶಿವನಾಯಕ್ ದೊರೆ, ಭಾವೈಕ್ಯತ ವೇದಿಕೆಯ ಪಿ. ಅಬ್ದುಲ್, ಶಿಬಿರದ ನಿರ್ದೇಶಕಿ ಡಾ. ಸಹನಾ ಪಿಂಜಾರ, ಸಂಚಾಲಕ ರಿಯಾಜ್ ಸಿಹಿಮೊಗೆ, ಪತ್ರಕರ್ತರಾದ ಅಂಕಲೇಶ್ ಹಾಗೂ “ಯುವರಂಗ 2025” ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

# 17 ಲಕ್ಷ ಮೌಲ್ಯದ ಪದಾರ್ಥ ವಶ: ಎಸ್ಪಿ ಕವಿತಾ

ಚಾಮರಾಜನಗರ: ಚಾ.ನಗರ ಹಾಗೂ ಯಳಂದೂರು ಪಟ್ಟಣದಲ್ಲಿ ನಡೆದ ಕಳ್ಳತನ ಪ್ರಕರಣ ಸಂಬಂಧ 9 ಆರೋಪಿಗಳನ್ನು ಬಂಧಿಸಿದ್ದು ಅವರಿಂದ 17 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ವ–ರಿಷ್ಠಾಧಿಕಾರಿ ಕಚೇರಿ ಸಭಾಂ ಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚಾ.ನಗರ ಪಟ್ಟಣ ಪೊಲೀಸ್ ಠಾಣೆ ಹಾಗೂ ಯಳಂದೂರು ಪಟ್ಟಣದಲ್ಲಿ ದಾಖಲಾಗಿದ್ದ 6 ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿ ಗಳನ್ನು ಬಂಧಿಸಿದ್ದು ಅವರಿಂದ 10 ಬೈಕ್‌ಗಳು, 2 ಕಾರುಗಳು ಹಾಗೂ 70 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.ಚಾ.ನಗರ ಪಟ್ಟಣ ಪೊಲೀಸ್ ಠಾಣೆ



ವ್ಯಾಪ್ತಿಯಲ್ಲಿ ನಡೆದಿದ್ದ 5 ಕಳ್ಳತನ ಪ್ರಕರಣ ಸಂಬಂಧ 70 ಗ್ರಾಂ ಚಿನ್ನಾಭರಣ, 2 ಕಾರುಗಳು, 2 ಬೈಕ್‌ಗಳು, 1.50 ಲಕ್ಷ ನಗದು ಹಣವನ್ನು ವಶಪಡಿಸಿ ಕೊಳ್ಳ ಲಾಗಿದ್ದು ಚಾ.ನಗರ ಪಟ್ಟಣದ ಇಲಿಯಾಜ್‌ನಗರದ ಅರ್ಫಾಜ್ ಖಾನ್, ಮೈಸೂರು ಕೆ.ಜಿ.ಕೊಪ್ಪಲಿನ ಲೀಲಾ, ಚಾ.ನಗರ ತಾಲೂಕಿನ ಚಂದಕವಾಡಿ ಗ್ರಾಮದ ರಾಚಪ್ಪಾಜಿ, ತಮಿಳುನಾಡಿ, ವಿನೋದ್, ಯಳಂದೂರು ಪಟ್ಟಣದ ಹರೀಶ್ ಎಂಬುವವರನ್ನು ಬಂಧಿಸಲಾಗಿದೆ ಎಂದರು.

ಉಳಿದಂತೆ ಯಳಂದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಬೈಕ್‌ಗಳ ಕಳ್ಳತನ ಸಂಬಂಧ ಬನ್ನೂರು ಹೋಬಳಿಯ ಬಿ.ಬೆಟ್ಟಹಳ್ಳಿಯ ಮದನ್, ಕೆ.ಆರ್.ನಗರ ತಾಲೂಕಿನ ಗಂಧನಹಳ್ಳಿಯ ಅರ್ಜುನ, ಆಲಗೂಡಿನ ಪ್ರವೀಣ, ಎಡತಲೆಯ ಕಾರ್ತಿಕ್ ಎಂಬು ವವರನ್ನು ಬಂಧಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿಜಿಲ್ಲಾಪೊಲೀಸ್‌ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ಪಿಗಳಾದ ಲಕ್ಷ್ಮಯ್ಯ, ಧರ್ಮೇಂದ್ರ, ಪಟ್ಟಣ ಠಾಣೆಯ ಇನ್ಸ್‌ಪೆಕ್ಟರ್ ಶ್ರೀಕಾಂತ್, ಸೆನ್ ಠಾಣೆಯ ಇನ್ಸ್‌ಪೆಕ್ಟರ್ ಸಾಗರ್ ಇದ್ದರು.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.